**2ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಸಕೋಟೆ**

**ಸಿ.ಸಿ.197/2013**

| | | |
|---|---|---|
| ಹೆಸರು | ಸೋಮೇಗೌಡ ಎನ್. | ಪ್ರಾ.ಸಾ.4 |
| ತಂದೆ ಹೆಸರು | ನಂಜಪ್ಪ | ಚಾ.ಸಾ.5 |
| ವಯಸ್ಸು | 52 ವರ್ಷ | |
| ಕೆಲಸ | ಎ.ಎಸ್.ಐ. | ಸಾ.ಪ್ರ.ವ.ಬೋ |
| ಹಾಲಿ ವಾಸ | ಹೊಸಕೋಟೆ | ದಿ: 29.10.2024 |

**ಮುಖ್ಯ ವಿಚಾರಣೆ: ಮಾನ್ಯ ಎಪಿಪಿ ರವರಿಂದಃ-**

ನಾನು 2002 ರಿಂದ 2005 ರವರೆಗೆ ನಂದಗುಡಿ ಪೊಲೀಸ್ ಠಾಣೆಯಲ್ಲಿ ಚಾಲಕನಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿ:28.04.2005 ರಂದು ಬೈಲನರಸಾಪುರದ ಹತ್ತಿರ ನಾನು ಹಾಗೂ ಚಾ.ಸಾ.1 ರವರು ಸೇರಿ ಠಾಣಾ ವಾಹನದಲ್ಲಿ ಹೋಗುತ್ತಿದ್ದಾಗ ಸದರಿ ಗ್ರಾಮದಲ್ಲಿ ಭಟ್ಟಿ ಸಾರಾಯಿ ಬಾಟಲಿಗಳನ್ನು ದಾಸ್ತಾನು ಮಾಡಿರುವ ಮಾಹಿತಿ ಬಂದಿದ್ದು, ಅಸ್ಲಮ್ ಎನ್ನುವವರ ಮನೆಗೆ ದಾಳಿ ಮಾಡಿದ್ದು ಅಲ್ಲಿ ಖಾಲಿ ಬಾಟಲಿಗಳು ಹಾಗೂ ಕಳ್ಳಭಟ್ಟಿ ಸಾರಾಯಿಯನ್ನು ಇಟ್ಟಿದ್ದು ಅವುಗಳನ್ನು ಚಾ.ಸಾ.1 ರವರು ವಶಪಡಿಸಿಕೊಂಡು ನಾನು ಚಾಲನೆ ಮಾಡಿಕೊಂಡು ಹೋಗಿದ್ದ ಠಾಣಾ ವಾಹನ ಸಂ. ಕೆಎ-01-ಜಿ-8150 ದಲ್ಲಿ ಇಟ್ಟಿದ್ದು ನಂತರ ನಾವು ಸದರಿ ವಾಹನದಲ್ಲಿ ಠಾಣೆಗೆ ಬಂದಿರುತ್ತೇವೆ. ಸಾಕ್ಷಿ ನಿ.ಪಿ.5 ರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿ.ಪಿ.5[ಡಿ] ಎಂದು ಗುರುತಿಸಲಾಯಿತು. ಪಂಚನಾಮೆ ಜರುಗಿಸಿ ಮುದ್ದೆಮಾಲುಗಳನ್ನು ಸದರಿ ವಾಹನದಲ್ಲಿ ತೆಗೆದುಕೊಂಡು ಬಂದಿದ್ದು ಪಂಚನಾಮೆಗೆ ನಾನು ಸಹಿ ಮಾಡಿರುತ್ತೇನೆ.

**ಪಾಟೀ ಸವಾಲು : ಆರೋಪಿ ಪರ ವಕೀಲರಿಂದ : -**

ಠಾಣೆಯಿಂದ ದಾಳಿ ಮಾಡಿದ ಸ್ಥಳಕ್ಕೆ 5 ಕಿ.ಮೀ. ದೂರವಿತ್ತು. ನಾವು ವಶಪಡಿಸಿಕೊಂಡಿರುವ ಮುದ್ದೆಮಾಲು ಪ್ರಸ್ತುತ ನ್ಯಾಯಾಲಯದ ಮುಂದೆ ಇರುವುದಿಲ್ಲ. ನಿ.ಪಿ.5 ನ್ನು ಯಾವ ಸಮಯದಲ್ಲಿ ಬರೆದಿರುತ್ತಾರೆಂದು ನೆನಪಿಲ್ಲ, ಅದನ್ನು ನಮ್ಮ ಠಾಣಾ ಬರಹಗಾರರಾದ ನಾಗರಾಜರವರು ಬರೆದಿರುತ್ತಾರೆ. ಮಹಜರ್ ಸಮಯದಲ್ಲಿ ಹಾಜರಿದ್ದ ಸಾಕ್ಷಿಗಳ ಬಗ್ಗೆ ನನಗೆ ಗೊತ್ತಿಲ್ಲ. ನಾನು

ಮಹಜರ್ ಮಾಡಿರುವ ಸ್ಥಳವನ್ನು ನೋಡಿರದ ಕಾರಣ ಅದರ ಚೆಕ್ಕುಬಂದಿ ಹೇಳಲು ಬರುವುದಿಲ್ಲ. ವಾಹನದಲ್ಲಿ ಖಾಲಿ ಬಿಳಿಯ ಬಣ್ಣದ ಕ್ಯಾನನ್ನು ತಂದಿಟ್ಟರು. ವಶಪಡಿಸಿಕೊಂಡ ಬಾಟಲಿಗಳ ಕಂಪನಿ ನನಗೆ ಗೊತ್ತಿಲ್ಲ. ಆರೋಪಿ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿ. ಆರೋಪಿಯ ತಪ್ಪಿಲ್ಲದಿದ್ದರೂ ಮೇಲಧಿಕಾರಿಯ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)**

**ಓ.ಹೇ.ಕೇ.ಸ.ಇದೆ**

**2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಹೊಸಕೋಟೆ.**